# ಪ್ರಧಾನ ಜಿಲ್ಲಾ, ಸತ್ರ ಮತ್ತು ವಿಶೇಷ ನ್ಯಾಯಾಲಯ,

# ಬಳ್ಳಾರಿ

**ವಿಶೇಷ ಮೊಕದ್ದಮೆ ಸಂಖ್ಯೆಃ 680 /2025**

**ಪಿ.ಡಬ್ಲ್ಯೂಃ3 (ಸಿಡಬ್ಲ್ಯೂಃ 5)**

| | | |
|---|---|---|
| **ಸಾಕ್ಷಿದಾರರ ಹೆಸರು** | : | **ಶ್ರೀ ವಿ.ಎಸ್.ಪೂಜಾರ್** |
| **ತಂದೆಯ ಹೆಸರು** | : | **ಹನುಮಂತಪ್ಪ ಪೂಜಾರ್** |
| **ವಯಸ್ಸು** | : | **51 ವರ್ಷ** |
| **ಕೆಲಸ** | : | **ಅಬಕಾರಿ ಅಧೀಕ್ಷಕರು , ಅಬಕಾರಿ ಜಂಟಿ ಆಯುಕ್ತರ ಕಚೇರಿ (ಜಾರಿ ಮತ್ತು ತನಿಖೆ), ಹೊಸಪೇಟೆ** |
| **ವಾಸ ಸ್ಥಳ** | : | **ಹೊಸಪೇಟೆ** |

**ಸಾಕ್ಷಿಗೆ ದಿನಾಂಕ 20.02.2026 ರಂದು ಪ್ರಮಾಣ ವಚನ ಭೋಧಿಸಲಾಯಿತು.**

**ಸಾಕ್ಷಿ ವಿಚಾರಣೆಯನ್ನು ವೀಡಿಯೋ ಕಾನ್ಫರೆನ್ಸ ಮೂಲಕ ತೆಗೆದುಕೊಳ್ಳಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು ದಿಃ7.7.2019 ರಿಂದ ದಿಃ3.8.2023 ರವರೆಗೆ ಬಳ್ಳಾರಿಯಲ್ಲಿ ಉಪ ಅಧೀಕ್ಷಕರು ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಅಬಕಾರಿ ಜಂಟಿ ಆಯುಕ್ತರ ಕಚೇರಿ ನಮ್ಮ ವ್ಯಾಪ್ತಿಯಲ್ಲಿ ಇತ್ತು.

**Spl.C.No.680/2025**
**P.W.3 (C.W.5)**
**Date : 20.02.2026**

**2.** ದಿಃ30.11.2024 ರಂದು ಕುರುವಳ್ಳಿ ಗ್ರಾಮದ ಸುತ್ತ ಮುತ್ತದ ಗ್ರಾಮಗಳನ್ನು ಗಸ್ತು ಮಾಡಬೇಕಾಗಿದೆ , ಆ ಬಗ್ಗೆ ದಾಳಿ ನಡೆಸಲು ಮತ್ತು ಗಾಂಜಾ ಗಿಡಗಳನ್ನು ಪತ್ತೆ ಹಚ್ಚಲು ಅನುಮತಿಯನ್ನು ಕೋರಿದ್ದು ಅದರಂತೆ ನಾನು ಅನುಮತಿಯನ್ನು ನೀಡಿದ್ದೇನೆ. ಸದರಿ ಪತ್ರವನ್ನು ಗುರುತಿಸುತ್ತೇನೆ. ಪತ್ರವನ್ನು **ನಿಪಿ.6** ಎಂದು ಸಾಕ್ಷಿಯ ಸಹಿಯನ್ನು **ನಿಪಿ.6 ಎ** ಎಂದು ಗುರುತಿಸಲಾಯಿತು. ನಾನು ನೀಡಿದ ಅನುಮತಿ ಪತ್ರವನ್ನು ಗುರುತಿಸುತ್ತೇನೆ. ಅದನ್ನು **ನಿಪಿ.7** ಎಂದು ಸಾಕ್ಷಿಯ ಸಹಿಯನ್ನು **ನಿಪಿ7 ಎ** ಎಂದು ಗುರುತಿಸಲಾಯಿತು.

**3**. ನಾನು , ಅಬಕಾರಿ ನಿರೀಕ್ಷಕರು , ಪಂಚರಾದ ಚಾಸಾ.2 ರಿಂದ 4 ರವರು ಸೇರಿಕೊಂಡು ಬೆಳಿಗ್ಗೆ 10.00 ಗಂಟೆಗೆ ಹೊರಟು ಬೆಃ 10.20 ಗಂಟೆಗೆ ಜಮೀನು ತಲುಪಿ ದಾಳಿ ಮಾಡಿದ್ದೇವೆ. ಸದರಿ ಜಮೀನಿನಲ್ಲಿ ಹತ್ತಿ ಬೆಳೆ ಬೆಳೆಯಲಾಗಿತ್ತು ಮತ್ತು 3 ಗಾಂಜಾ ಗಿಡಗಳನ್ನು ಬೆಳೆಯಲಾಗಿತ್ತು. ಅವುಗಳನ್ನು ನಾವು ಟೇಪಿನಿಂದ ಅಳತೆ ಮಾಡಿದ್ದು ಅವುಗಳನ್ನು ತೂಕ ಮಾಡಿದಾಗ 12 ಕೆಜಿ 600 ಗ್ರಾಂ ಗಾಂಜಾ ತೂಕ ಬಂತು.

**4.** ಕಂದಾಯ ನಿರೀಕ್ಷಕರು ಆದ ಮಂಜುನಾಥ ರವರನ್ನು ಕೇಳಿದಾಗ ಸದರಿ ಜಮೀನಿನ ಮಾಲೀಕ ಕುಚ್ಚಲ ಸುರೇಶನಾಗಿದ್ದು ಜಮೀನು ಸರ್ವೆ ನಂಃ278 ಎ 1 ಎಂದು ತಿಳಿಸಿದರು. ಸ್ಥಳದಲ್ಲಿ ಬರೆದ ಪಂಚನಾಮೆಯನ್ನು ಗುರುತಿಸುತ್ತೇನೆ. ಪಂಚನಾಮೆಯನ್ನು ಈಗಾಗಲೇ ನಿಪಿ.3 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು **ನಿಪಿ.3(ಸಿ)** ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಫೋಟೋ ತೆಗೆಯಲಾಯಿತು ಮತ್ತು

ವೀಡಿಯೋಗ್ರಾಫಿ ಮಾಡಲಾಯಿತು. ಫೋಟೋಗಳನ್ನು ಈಗಾಗಲೇ ನಿಪಿ.4 ಎಂದು ಗುರುತಿಸಲಾಗಿದೆ.

**ಪಾಟೀಸವಾಲುಃ ಶ್ರೀ ಕೆ ಬಿ ಆರ್ಃ ವಕೀಲರು ಆರೋಪಿ ಪರವಾಗಿಃ**

**5.** ಪಂಚನಾಮೆಯಲ್ಲಿ ನವೆಂಬರ್ 11 ನೇ ತಾರೀಖು ಎಂದು ಬರೆಯಲಾಗಿದೆ ಎನ್ನುವುದು ನನಗೆ ಗೊತ್ತಿಲ್ಲ. ನೋಟಿಸ್ ನ್ನು ಪಡೆದುಕೊಂಡ ಸಮಯವನ್ನು ನಾನು ನಮೂದು ಮಾಡಿಲ್ಲ. ಅಬಕಾರಿ ನಿರೀಕ್ಷಕರು ಮನವಿ ಪತ್ರ ನೀಡಿದ್ದಾರೆ. ದಿಃ30.11.2024 ರಂದು ನಾನು, ಪಂಚರು ಮತ್ತು ರೆವಿನ್ಯೂ ಇಲಾಖ ಸಿಬ್ಬಂದಿಗಳುದಾಳಿಯಲ್ಲಿ ಭಾಗವಹಿಸಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಸ್ಥಳದಲ್ಲಿ 3 ಗಾಂಜಾ ಗಿಡಗಳನ್ನು ಅಮಾನತ್ತುಪಡಿಸಿಕೊಂಡು ಅವುಗಳನ್ನು ತೂಕ ಮಾಡಿದಾಗ ಅವು 12 ಕೆಜಿ 600 ಗ್ರಾಂ ತೂಕ ಬಂತು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಪಂಚನಾಮೆ ಕಾಲಕ್ಕೆ ವೀಡಿಯೋ ಮತ್ತು ಫೋಟೋ ತೆಗೆದಿಲ್ಲ ಎನ್ನುವುದು ಸರಿಯಲ್ಲ. ನಾನು ದಾಳಿಯಲ್ಲಿ ಭಾವಹಿಸಿಲ್ಲ ಎನ್ನುವುದು ಸರಿಯಲ್ಲ.

**ಮರು-ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ**

**ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

**ಪ್ರಧಾನ ಜಿಲ್ಲಾ, ಸತ್ರ ಮತ್ತು ವಿಶೇಷ ನ್ಯಾಯಾಧೀಶರು,**
**ಬಳ್ಳಾರಿ.**